# ನಟಿಯರ ಸೀರೆ ಮೋಹ..



ಮಾದಕತೆ, ಮೋಹಕತೆ, ಚೆಲುವು ಎಲ್ಲವೂ ಮೈದುಂಬಿದೆ ಈ ಸೀರೆಯೆಂಬ ಆರು ಯಾರ್ಡ್ ಉದ್ದದ ವಸ್ತ್ರ ವೈಭವದಲ್ಲಿ. ಪಾಶ್ಚಾತ್ಯ ಉಡುಪಿನಂತೆ ಎಲ್ಲವನ್ನೂ ಬಿಚ್ಚಿಡದ ತುಂಟತನ.. ಆ ಬಳುಕುವ ಸೊಂಟದ ಸುಳಿ, ಬೆನ್ನಿನ ರುಳಿ ಕೊಂಚವೇ ತೋರಿಸಿ ಕುತೂಹಲ ಮೂಡಿಸುವ ಚೇಷ್ಟೆ. ಆಕರ್ಷಕ ಮೈಮಾಟವಿದ್ದರೆ ಮತ್ತಷ್ಟು ಮೆರುಗು ಸೇರಿಸುವ ಬೆರಗು; ಕೊಂಚ ಕುಂದಿದ್ದರೆ ಎಲ್ಲವನ್ನೂ ಮರೆಸಿ, ಮುಜುಗರ ತಪ್ಪಿಸಿ ಸೌಂದರ್ಯಕ್ಕೆ ಕುಂದಣವಿಡುವ ಚಾಣಾಕ್ಷತೆ.

ಈ ಸೀರೆಯ ವೈಶಿಷ್ಟ್ಯವೇ ಹಾಗೆ. ಆಧುನಿಕತೆಯ ಭರಾಟೆಯಲ್ಲೂ ದೇಸಿ ಸೊಗಡಿಗೆ ಗತ್ತು, ಗಮ್ಮತ್ತು ಸೇರಿಸುವ ಹೆಚ್ಚುಗಾರಿಕೆ ಈ ಅಂದದ ಉಡುಗೆಗಿದೆ. ಜಾಗತೀಕರಣದ ಬಿರುಗಾಳಿಯಲ್ಲಿ ಓಲಾಡುತ್ತಿರುವ ನಮ್ಮ ಸಂಸ್ಕೃತಿ, ಸಂಪ್ರದಾಯವನ್ನು ಗಟ್ಟಿಗೊಳಿಸುವ ತಾಕತ್ತು ಈ ಚೆಂದದ ವಸ್ತ್ರಕ್ಕಿದೆ.

ಸಿನಿಮಾಗಳಲ್ಲಿ ಗ್ಲಾಮರಸ್ ಉಡುಗೆಗಳಲ್ಲಿ ಗಮನಸೆಳೆಯುವ ನಟಿಮಣಿಯರ ನೆಚ್ಚಿನ ಉಡುಗೆ ಕೂಡ ಸೀರೆ. ಸಾಂಪ್ರದಾಯಿಕ ಶೈಲಿಯ ಈ ಉಡುಪು ಹೆಚ್ಚು ಮಾದಕತೆಯನ್ನು ನೀಡುತ್ತದೆ. ತೆಳ್ಳಗೆ ಬಳುಕುವ ಇವರ ಬಳ್ಳಿಯಂತಹ ದೇಹಕ್ಕೆ ಮತ್ತಷ್ಟು ಮೆರುಗು ನೀಡುತ್ತದೆ. ಹೀಗಾಗಿ ಮಧುಬಾಲಾರಿಂದ ಹಿಡಿದು ಈಗಿನ ಪ್ರಿಯಾಂಕ ಚೋಪ್ರಾವರೆಗೂ ಸೀರೆ ಪ್ರಿಯರೇ. ಐಶ್ವರ್ಯ, ಹೇಮಮಾಲಿನಿ, ಮಾಧುರಿ ದೀಕ್ಷಿತ್, ಸುಶ್ಮಿತಾ ಸೇನ್, ಕರೀನಾ, ಸದಭಿರುಚಿಯ ಸೀರೆಯನ್ನು ತೊಡುವುದರಲ್ಲಿ ಜನಪ್ರಿಯರು.

ಅಂದು ಮಧುಬಾಲಾ ತೊಟ್ಟ ಸಾಂಪ್ರದಾಯಿಕ ಶೈಲಿಯ ಸೀರೆ ಇಂದಿಗೂ ಮದುವೆಯ ಸಂದರ್ಭಗಳಲ್ಲಿ ಬಹು ಬೇಡಿಕೆಯನ್ನು ಹೊಂದಿದೆ. ಹಾಗೇ ಚಿರಯೌವನೆ ನಟಿ ರೇಖಾ ಅಗಲವಾದ ಅಂಚುಳ್ಳ ಕಾಂಜೀವರಂ ಸೀರೆ ತೊಟ್ಟು ವೇದಿಕೆಯ ಮೇಲೆ ಬರುತ್ತಿದ್ದರೆ ಅಭಿಮಾನಿಗಳ ಕೂಗು ಮುಗಿಲು ಮುಟ್ಟುತ್ತದೆ.

'ಹಮ್ ಆಪ್ ಕೆ ಹೇ ಕೌನ್' ಸಿನಿಮಾದಲ್ಲಿನ ನಟಿ ಮಾಧುರಿ ದೀಕ್ಷಿತ್ ತೊಟ್ಟ ಬೆನ್ನಿಲ್ಲದ ಬ್ಲೌಸ್ ಮತ್ತು ಆಕರ್ಷಕ ಎಂಬ್ರಾಯಿಡರಿಯಿಂದ ಕೂಡಿದ ಗಾಢ ನೇರಳೆ ರಂಗಿನ ಸೀರೆ ಇಂದಿಗೂ ಫ್ಯಾಷನ್ ಕ್ಷೇತ್ರದಲ್ಲಿ ಮಹತ್ವ ಪಡೆದಿದೆ. 'ದೇವದಾಸ್' ಸಿನಿಮಾದಲ್ಲಿ ಐಶ್ವರ್ಯ ರೈ ತೊಟ್ಟ ದಟ್ಟ ಕಸೂತಿಯುಳ್ಳ ಕೆನೆ ಬಣ್ಣದ ರೇಷ್ಮೆ ಸೀರೆ ಬಾಲಿವುಡ್ ಸೀರೆಯ ಇತಿಹಾಸದಲ್ಲೇ ಹೊಸ ಮುನ್ನುಡಿ ಬರೆಯಿತು. 'ಮೈ ಹೂಂ ನಾ' ಸಿನಿಮಾದಲ್ಲಿ ಸುಶ್ಮಿತಾ ಸೇನ್ ತೊಟ್ಟಿರುವ ಕೆಂಪುಬಣ್ಣದ ಪಾರದರ್ಶಕ ಫ್ಯಾನ್ಸಿ ಸೀರೆಯನ್ನು ಮರೆಯಲು ಸಾಧ್ಯವೇ?.

ಸೀರೆ ನಾರಿಯ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ ಎಂಬ ಸತ್ಯವನ್ನು ಈ ಬೆಡಗಿಯರು ಅರಿತಂತಿದೆ. ಹೀಗಾಗಿ ಪರದೆಯ ಮುಂದೆ ಮಾತ್ರವಲ್ಲದೆ ಪರದೆಯ ಹಿಂದೆ ಕೂಡಾ ಸೀರೆಯಲ್ಲೇ ಮಿಂಚುತ್ತಾರೆ. 'ಡರ್ಟಿ ಪಿಕ್ಚರ್'ನಲ್ಲಿ ತುಂಡುಡುಗೆ ತೊಟ್ಟು ಪಡ್ಡೆ ಹುಡುಗರ ನಿದ್ದೆಗೆಡಿಸಿದ್ದ ವಿದ್ಯಾ ಬಾಲನ್‌ಗೆ ಸೀರೆ ಎಂದರೆ ಅಚ್ಚುಮೆಚ್ಚು. ಹೀಗಾಗಿ ಯಾವುದೇ ಖಾಸಗಿ ಪಾರ್ಟಿಗೂ ಈಕೆ ಸೀರೆಯನ್ನೇ ಉಡುತ್ತಾಳೆ.



'ಗ್ಲಾಮರ್ ಗರ್ಲ್' ಪ್ರಿಯಾಂಕ ಚೋಪ್ರಾ ಟೀವಿ ಶೋಗಳಲ್ಲಿ ಹಾಟ್ ಸೀರೆಯನ್ನುಟ್ಟು ಮಾಡ್ ಹುಡುಗಿಯರಿಗೂ ಸೀರೆ ಮೇಲಿನ ಒಲವು ಹೆಚ್ಚುವಂತೆ ಮಾಡಿದ್ದಾಳೆ. 'ಇದು ತೊಡಲು ಆರಾಮದಾಯಕ ಎನ್ನಿಸುವುದರ ಜೊತೆಗೆ ಬೇರೆಲ್ಲಾ ಉಡುಪಿಗಿಂತ ಗ್ಲಾಮರಸ್ ನೋಟ ನೀಡುತ್ತದೆ' ಎನ್ನುತ್ತಾಳೆ ಪ್ರಿಯಾಂಕ.

ಹಿರಿತೆರೆಗಿಂತ ತಾವೇನೂ ಕಮ್ಮಿ ಇಲ್ಲವೆಂಬಂತೆ ಕಿರಿತೆರೆಯಲ್ಲೂ ನವೀನ ಶೈಲಿ ಸೀರೆಗಳ ಮೂಲಕ ಹೆಂಗಳೆಯರ ಮನಗೆಲ್ಲುವ ಧಾರಾವಾಹಿ ನಟಿಯರ ಸಂಖ್ಯೆಗೇನೂ ಕಮ್ಮಿಯಿಲ್ಲ. 'ಕುಂಕುಮ್', 'ಕಸೌಟಿ ಜಿಂದಗಿ'.. ಹೀಗೆ ಈಗಿನ ಪೀಳಿಗೆಯ ಧಾರಾವಾಹಿಯ ಸೀರೆಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಸರಳ ಸೀರೆಗಿಂತ ಚಿತ್ತಾಕರ್ಷಕ ಬಣ್ಣ, ಹರಳು, ಜರಿಗಳಿಂದ ತುಂಬಿರುವ ಆಡಂಬರದ ಸೀರೆಯನ್ನು ಬಾಲಿವುಡ್ ಮಂದಿ ಇಷ್ಟಪಡುತ್ತಾರೆ. ಆಕರ್ಷಕವಾದ ಸಿಲ್ಕ್, ಟೆರಿಕಾಟ್, ಶಿಫಾನ್, ಜಾರ್ಜೆಟ್, ಕ್ರೇಪ್ ಸೀರೆಗಳನ್ನು ಹೆಚ್ಚಾಗಿ ಉಡುತ್ತಾರೆ. ಶಿಫಾನ್, ಜಾರ್ಜೆಟ್, ಕ್ರೇಪ್ ಸೀರೆಗಳಲ್ಲಿ ಮಹಿಳೆಯರು ತೆಳುವಾಗಿ ಕಾಣುತ್ತಾರೆ ಅಲ್ಲದೆ, ರಮಣೀಯ ನೋಟವನ್ನು ನೀಡುತ್ತದೆ. ಹಾಟ್ ಪಿಂಕ್, ಕಿತ್ತಳೆ, ಕೆಂಪು, ಆಕಾಶ ನೀಲಿ ಮತ್ತು ತಿಳಿ ಬಣ್ಣಗಳು ಈ ಕಾಲದ ಫ್ಯಾಷನ್.

ಮೊದಲೆಲ್ಲ ದೊಡ್ಡ ಮಾಲ್ ಮತ್ತು ಶೋರೂಂಗಳಲ್ಲಿ ಮಾತ್ರ ಸಿಗುತ್ತಿದ್ದ ಈ ಸೀರೆಗಳನ್ನು ಆನ್‌ಲೈನ್ ಸೀರೆ ಮಳಿಗೆಗಳು ಪ್ರದರ್ಶನ ಮಾಡಲು ಆರಂಭಿಸಿವೆ. ಇಲ್ಲಿ ನವೀನ ವಿನ್ಯಾಸದ ಸೀರೆಗಳ ಜೊತೆಗೆ ಬಾಲಿವುಡ್ ಬೆಡಗಿಯರು ಸಮಾರಂಭಗಳಲ್ಲಿ ಹಾಕಿಕೊಂಡ ಸೀರೆ ಕೂಡಾ ದೊರೆಯುತ್ತದೆ.

ಕಾಲಕ್ಕೆ ತಕ್ಕಂತೆ ಸೀರೆಯ ಶೈಲಿಯಲ್ಲೂ ಬದಲಾವಣೆಯಾಗುತ್ತಿದೆ. ಎಷ್ಟೇ ಆಧುನಿಕ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟರೂ ಸೀರೆಯ ಜನಪ್ರಿಯತೆ ಕಡಿಮೆಯಾಗಿಲ್ಲ. ಹಾಗೆಯೇ ಈ ತಾರೆಯರ ಕೃಪಾಕಟಾಕ್ಷದಿಂದ ಚಿತ್ತಾಕರ್ಷಕ ಸೀರೆ ಹುಟ್ಟಿ ಬರಲು ಕಾರಣವಾಯಿತು ಎಂದರೆ ತಪ್ಪಾಗಲಾರದು.

■ ವಿದ್ಯಾಶ್ರೀ ಎಸ್